**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 19-08-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ವೆಂಕಟೇಶ್ ವಕೀಲರವರಿಂದಃ

ನಿಪಿ-1 ಮತ್ತು 5 ರಲ್ಲಿನ ಆರೋಪಿಯ ಸಹಿಯ ನಡುವೆ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಸಹಿ ಆರೋಪಿಯದ್ದಾಗಿದೆ. ನಿಪಿ-5 ರಲ್ಲಿನ ಸಹಿಯು ಯಾರುದು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-5 ಆರೋಪಿಯದ ಸಹಿ ಅಲ್ಲದಿದ್ದರೂ ನೋಟಿಸ್ ಕಳುಹಿಸಿರುವುದಾಗಿ ನಿಪಿ-5 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2020 ರ ಅವಧಿಯಲ್ಲಿ ಆರೋಪಿಯು ನನ್ನಿಂದ 1 ವರೆ ಲಕ್ಷ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು 18-10-2021 ರಂದು 2 ಲಕ್ಷ ಪಡೆದುಕೊಂಡಿದ್ದರು ಎನ್ನುತ್ತಾರೆ. ಸದರಿ 1 ವರೆ ಲಕ್ಷಕ್ಕೆ ಶೇಕಡಾ 2 ಬಡ್ಡಿ ದರದಲ್ಲಿ ಒಟ್ಟು 2 ಲಕ್ಷ ನಿಗದಿಯಾಗಿದ್ದು ಮಂಡ್ಯ ಎಸ್ ಬಿ ಐ ಬಳಿಯಲ್ಲಿ 1 ಲಕ್ಷ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿವಾದಿತ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ನನ್ನ ಮತ್ತು ಆರೋಪಿಯ ನಡುವೆ ಇರಲಿಲ್ಲ. ಎಸ್ ಬಿ ಐ ಬಳಿಯಲ್ಲಿ 1 ಲಕ್ಷ ಪಡೆದುಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬೇರೆ ವ್ಯವಹಾರ ಎನ್ನುತ್ತಾರೆ. ಸದರಿ 1 ಲಕ್ಷವನ್ನು ಯಾವಾ ದಿನಾಂಕದಂದು ಪಡೆದುಕೊಂಡಿದ್ದೇನೆಂದು ನೆನಪಿಲ್ಲ. ದಿಃ10-10-2022 ರಂದು ಸದರಿ ಆರೋಪಿಯು ನನಗೆ 1 ಲಕ್ಷ ನೀಡಿದ್ದಾರೆಂದರೆ ಮೊದಲು ಬೇರೆ ವ್ಯವಹಾರ ಇದ್ದು ಅದಕ್ಕೆ ನೀಡಿದ್ದಾರೆ ಎನ್ನುತ್ತಾರೆ. ಸದರಿ ಬೇರೆ ವ್ಯವಹಾರ ಇತ್ತು ಎಂದು ತೋರಿಸಲು ಆರೋಪಿ ಬರೆದುಕೊಟ್ಟ ದಾಖಲೆ ಇದೆ. ಸದರಿ ದಾಖಲೆಯು ಒಂದು ಪತ್ರದಲ್ಲಿ ಸಹಿ ಮಾಡಿ ಕೊಟ್ಟದ್ದಾಗಿದೆ. ಪ್ರಕರಣವನ್ನು 2022 ರಲ್ಲಿ ಹೂಡಿದ್ದೇನೆ. ಆರೋಪಿಯು ಸದರಿ ಹಣವನ್ನು ಪ್ರಕರಣ ಹೂಡಿದ ನಂತರ ನೀಡಿದ್ದಾರೆಂದರೆ ಸರಿ. ದಿಃ28-11-2022 ರಂದು ಆರೋಪಿ ಮತ್ತು ಆತನ ಹೆಂಡತಿ ತಮ್ಮ ಮನೆಗೆ ಕರೆದು 50 ಸಾವಿರ ಹಣ ನೀಡಿದ್ದಾರೆಂದರೆ ಸರಿಯಲ್ಲ. 50 ಸಾವಿರ ಹಿಂದುರುಗಿಸಿದಾಗ ಪ್ರಕರಣ ವಾಪಸ್ ಪಡೆಯುವುದಾಗಿ ಹೇಳಿ ಬಂದಿದ್ದೇನೆ

ಎಂದರೆ ಸರಿಯಲ್ಲ. 18-10-2021 ರಂದು ಆರೋಪಿಯು ಮನೆಗೆ ಬನ್ನಿ 2 ಲಕ್ಷ ಸಾಲ ಪಡೆದಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯವರು ಆ ದಿನ ಕರ್ತವ್ಯದಲ್ಲಿದ್ದು ನಮ್ಮ ಮನೆಗೆ ಬಂದಿರಲಿಲ್ಲ ಎಂದರೆ ಸಂಜೆ 07-30 ರಲ್ಲಿ ಬಂದಿದ್ದರು ಎನ್ನುತ್ತಾರೆ. ದಿಃ19-01-2022 ರಂದು ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಬರೆದುಕೊಟ್ಟಿದ್ದರು ಎಂದು ಸುಳ್ಳು ನುಡಿಯುತ್ತಿದ್ದು ಖಾಲಿ ಚೆಕ್ ಗೆ ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಸಹಿ ಮತ್ತು ಒಕ್ಕಣೆಯ ಕೈ ಬರಹದ ನಡುವೆ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಬರೆದುಕೊಟ್ಟಿದ್ದರು ಎನ್ನುತ್ತಾರೆ. ಒಕ್ಕಣೆಯನ್ನು ಆರೋಪಿಯೇ ಬರೆದುಕೊಟ್ಟಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ 1,50,000/- ಪಡೆದಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ವ್ಯವಹಾರಕ್ಕೆ ಪಡೆದಿದ್ದೆ ಎನ್ನುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು